<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿದೆ.</u>

<u>ಪಾಟೀ ಸವಾಲುಃ ಪ್ರತಿವಾಯ ನಂ. 3, 4, 5 ಮತ್ತು 16 ಪರವಾಗಿ ಶ್ರೀ ಅರ ಎ ಪಿ ವಕೀಲರಿಂದ ಃ</u>

11. ಊಗರಖೋಡ ಗ್ರಾಮದ ಮನೆ ನಂ. 59 ಬ ಇದನ್ನು ನಿಂಗಪ್ಪ ಬಸಪ್ಪ ಶಿವಪೂಜಿ ಅಂದರೆ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಅಂದರೆ ಸರಿ . ಗ್ರಾಮ ಪಚಾಯತಿ ಮನೆ ನಂ. 57 ಇದನ್ನು ವಾದಿ ನಂ .6 ಹೆಸರಿನಲ್ಲಿ ಇದೆ ಅಂದರೆ ಸರಿ . ಗ್ರಾಮ ಪಚಾಯತಿ ಮನೆ ನಂ 58 ಇದನ್ನು ಪ್ರವಾದಿ ನಂ .1 ನಿಂಗಪ್ಪ ಬಸಪ್ಪ ಶಿವಪೂಜಿ ರವರ ಹೆಸರಿನಲ್ಲಿ ಇದೆ ಅಂದರೆ ಗೊತ್ತಿಲ್ಲ . ಮನೆ ನಂ 49 ಈ ಅಸ್ತಿಯು ವಾದಿ ನಂ 2 ಬಸವ್ವ ಬಾಳವ್ವ ಶಿವಪೂಜಿ ರವರ ಹೆಸರಿನಲ್ಲಿ ಇದೆ ಅಂದರೆ ಸರಿ .

12. ಜಮೀನು ಸರ್ವೇ ನಂ 93/4 ಬ/2 ನ್ನು 37 ಗುಂಟೆ ಇದನ್ನು 1 ನೇ ವಾದಿ ಮತ್ತು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಅಂದರೆ ಸರಿಯಲ್ಲ . 1984 ರ ನಂತರ ಏನಾಗಿದೆ ಅಂತಾ ನನಗೆ ಗೊತಿಲ್ಲ ಅಂತಾ ಸಾಕ್ಷಿ ಹೇಳುತ್ತಿದ್ದಾರೆ . ಸದರಿ ಜಮೀನು 1 ನೇ ವಾದಿ ಮತ್ತು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದಿದನ್ನು ಗೂತಿದ್ದರೂ ಕೂಡಾ ನಾನು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನ ಅಂದರೆ ಸರಿಯಲ್ಲ . ಅದೇ ಪ್ರಕಾರ ಸರ್ವೇ ನಂ 54/4 ಎ ಶಿವಪೂಜಿ ಬಸಪ್ಪ ಯಲ್ಲಪ್ಪ ಅಂದರೆ 6 ನೇ ವಾದಿಯ ಹೆಸರಿನಲ್ಲಿ ಇದೆ ಅಂದರೆ ನನಗೆ ಮಾಹಿತಿ ಇರುವುದಿಲ್ಲ. ನನಗೆ ಸದರಿ ವಿಚಾರ ಸಂಪೂರ್ಣ ಗೂತ್ತಿದ್ದರೂ ಕೂಡಾ ಸುಳ್ಳು ಸಾಕ್ಷಿ ನುಡಿಯುುತ್ತಿದ್ದೇನೆ ಅಂದರೆ ಸರಿಯಲ್ಲ .

13. 1984 ರಲ್ಲಿ ನಮ್ಮ ಮನೆತನದಲ್ಲಿ ಅಪಸಾತ ವಾಟ್ನಿ ಆಗಿದೆ ಅಂದರೆ ಸರಿಯಲ್ಲ . ಆ ಪ್ರಕಾರ ನಮ್ಮ ಹಿರಿಯರು ತಮ್ಮ ತಮ್ಮ ಹೆಸರಿನಲ್ಲಿ ಬಂದಿದ್ದ ಆಸ್ತಿಗಳನ್ನು ಪ್ರತ್ಯೇಕವಾಗಿ ದಾಖಲಿಸುವಂತೆ ವಾದಿಯರು ಕೂಟ್ಟಿರುತ್ತಾರೆ ಅಂದರೆ ಸರಿಯಲ್ಲ. ದಿಃ 16-06-1984 ರಲ್ಲಿ ವರದಿ ನೀಡಿದ್ದು , 6 ನೇ ವಾದಿಯ ತಂದೆ ಯಲ್ಲಪ್ಪ ಮಲ್ಲಪ್ಪ ಶಿವಪಜಾಜಿ ರವರು ಸಹಿ ಕೂಡಾ ಮಾಡಿರುತ್ತಾರೆ ಅಂದರೆ ಸರಿಯಲ್ಲ . . ಕಲ್ಲಪ್ಪ ನಿಂಗಪ್ಪ ಶಿವಪೂಜಿ ಕೂಡಾ ಸದರಿ ವರದಿಗೆ ಸಹಿ ಮಾಡಿರುತ್ತಾರೆ ಅಂದರೆ ಸರಿಯಲ್ಲ . 1 ನೇ ಪ್ರತಿವಾದಿ ರುದ್ರಪ್ಪ ಗಂಗಪ್ಪ ಶಿವಪೂಜಿ ಕೂಡಾ ಸಹಿ ಮಾಡಿರುತ್ತಾರೆ ಅಂದರೆ ಸರಿಯಲ್ಲ . ಶಾಂತವ್ವ ಕೋಂ ಬಸಪ್ಪ ಶಿವಪೂಜಿ ರವರು ಕೂಡಾ ಸಹಿ ಮಾಡಿರುತ್ತಾರೆ ಅಂದರೆ ಸರಿಯಲ್ಲ. ರುದ್ರಪ್ಪ ನಿಂಗಪ್ಪ ಶಿವಪೂಜಿ ರವರು ಕೂಡಾ ಸಹಿ ಮಾಡಿರುತ್ತಾರ' ಅಂದರೆ ಸರಿಯಲ್ಲ. . 1 ನೇ ವಾದಿ ಬಾಳಪ್ಪ ಶಿವಪೂಜಿ ರವರು ಸದರಿ ವರದಿಗೆ ಸಹಿ ಮಾಡಿರುತ್ತಾರೆ ಅಂದರೆ ಸರಿಯಲ್ಲ. . 1 ರಿಂದ 6 ನೇ ಪ್ರತಿವಾದಯರ ತಂದೆ ದುಂಡಪ್ಪ ಶಿಂದಗಿರಿ ರವರು ಕೂಡಾ ಸಹಿ ಮಾಡಿರುತ್ತಾರೆ ಅಂದರೆ ಸರಿಯಲ್ಲ. . ಯಲ್ಲಪ್ಪ ನಿಂಗಪ್ಪ ಕೂಲಕಾರ ರವರು ಸಾಕ್ಷಿದಾರ ಅಂತಾ ಸಹಿ ಮಾಡಿರುತ್ತಾರೆ ಅಂದರೆ ಸರಿಯಲ್ಲ . ಸದರಿ ವರದಿಯಂತೆ ಈಗಾಗಲೇ ಪಾಲು ವಿಬಾಗ ಅಗಿದ್ದರೂ ಕೂಡಾ ನಾನು ಈಗ ಉದ್ದೇಶಪೂರ್ಕವಾಗಿ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ . . ಅಪಸಾತ ವಾಟ್ನಿ ಪ್ರಕಾರ ಸರ್ವೇ ನಂ 73/ 2 ಎ ಕ್ಷೇತ್ರ 30 ಗುಟೆ , ಸರ್ವೇ ನಂ 73/2 ಬ ಕ್ಷೇತ್ರ 18 ಗುಂಟೆ , ಸರ್ವೇ ನಂ 73/2 ಕ 18 ಗುಂಟೆ , ಸರ್ವೇ ನಂ 73/3 ಎ 33 ಗುಂಟೆ ಜಮೀನುಗಳು ನಿಂಗಪ್ಪ , ಅಡಿವೆಪ್ಪ ತಂದೆ ಬಸಪ್ಪ ಶಿವಪೂಜಿ ಅಂದರೆ 3 ಮತ್ತು 4 ನೇ ಪ್ರತಿವಾದಿಯರ ಪಾಲಿಗೆ ಬಂದಿತ್ತು ಅಂದರೆ ಸರಿಯಲ್ಲ. . ಸರ್ವೇ ನಂ 73/5 ಎ , ಸರ್ವೇ ನಂ 73/6 , ಸರ್ವೇ ನಂ 73/5 ಬ , ಸರ್ವೇ ನಂ 73/5 ಬ+6 ಇವುಗಳು ಪ್ರತಿವಾದಿ 1 ಮತ್ತು 6 ನೇ ಪ್ರತಿವಾದಿಯರಿಗೆ ಫ್ರಾಪ್ತ ವಾಯಿತು ಅಂದರೆ ಸರಿಯಲ್ಲ. . ಸರ್ವೇ ನಂ 73/5 ಎ +ಬ+6 4 ಎಕರೆ 1 ಗುಂಟೆ ಅಸ್ತಿಯು 1 ನೇ ವಾದಿಯ ಪಾಲಿಗೆ ಬಂದಿತ್ತು ಅಂದರೆ ಸರಿಯಲ್ಲ. .

ಸರ್ವೇ ನಂ 73/5 ಎ+ಬಿ+6 ಮತ್ತು ಸರ್ವೇ ನಂ 93/4 ಬಿ/2 ಯಲ್ಲಪ್ಪ ಮಲ್ಲಪ್ಪ ಶಿವಪೂಜಿ ರವರಿಗೆ ಬಂದಿತ್ತು ಅಂದರೆ ಸರಿಯಲ್ಲ. . 1984 ರಲ್ಲಿಯೇ ಅಫಸಾತ ವಾಟ್ನಿ ಪ್ರಕಾರ ಡೈರಿ ಕೂಡಾ ಮಂಜೂರು ಅಗಿದೆ ಅಂದರೆ ಸರಿಯಲ್ಲ. 1984 ರಿಂದ ಪ್ರತ್ಯೇಕವಾಗಿ ಎಲ್ಲ ಪಾಲುದಾರರು ಪಹಣಿಯಲ್ಲಿ ಹೆಸರು ದಾಖಲು ಮಾಡಿ , ಸಾಗುವಳಿ ಮಾಡುತ್ತಿದ್ದಾರೆ ಅಂದರೆ ಸರಿಯಲ್ಲ. . ಅದೇ ಪ್ರಕಾರ ಹಿಸೆ ಪಾರ್ಮ ನಂ 21 ಮತ್ತು 4 ನ್ನು ಕೂಡಾ ಮಂಜೂರು ಮಾಡಲಾಗಿದೆ ಅಂದರೆ ಸರಿಯಲ್ಲ . . 1984 ರಿಂದ ಎಲ್ಲ ಸದಸ್ಯರು ಪ್ರತ್ಯೇಕವಾಗಿ ಪಾಲು ಮಾಡಿಕೊಂಡು ವಾಸವಾಗಿದ್ದರೂ ಕೂಡಾ ಈಗ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ನುಡಿಯತ್ತಿದೇನೆ ಅಂದರೆ ಸರಿಯಲ್ಲ. .

14. ಕಂದಾಯ ಇಲಾಖೆ ಯವರು ಕೆ ಜೇ ಪಿ ಪಾರ್ಮ ಮಾಡಲು ಕೂಡಾ ಆದೇಶ ಮಾಡಿದ್ದಾರೆ ಅಂದರೆ ಸರಿಯಲ್ಲ. ಅದರಂತೆ ಹಿಸೆಗಳನ್ನು ಕೂಡಾ ಪ್ರತ್ಯೇಕವಾಗಿ ಸರ್ವೇ ಇಲಾಖೆಯವರು ಪ್ರತ್ಯೇಕವಾಗಿ ತೋರಿಸಿರುತ್ತಾರೆ ಅಂದರೆ ಸರಿಯಲ್ಲ. ಕಂದಾಯ ಇಲಾಖೆಯವರು ತಮ್ಮ ದೈನದಿನ ಕೆಲಸದ ನಿಯಮಗಳಂತೆ ಈ ರೀತಿ ಎಲ್ಲ ಪ್ರತ್ಯೇಕ ಹಿಸೆಗಳನ್ನು ಮಾಡಿದ್ದಾರೆ ಅಂತಾ ಸೂಚಿಸುವುದು ಸರಿಯಲ್ಲ . 1984 ರಿಂದ ಇಲ್ಲಿವರೆಗೂ ನಾನು ಡೈರಿ ನಂ 2399 ನ್ನು ಪ್ರಶ್ನೆ ಮಾಡಿಲ್ಲ ಅಂದರೆ ನನಗೆ ಅದರ ಬಗ್ಗೆ ಮಾಹಿತಿ ಇರಲಿಲ್ಲ . ಪ್ರವೀಣ ಶ್ರೀಶೈಲ ಮಾರೀಹಾಳ 5 ನೇ ಪ್ರತಿವಾದಿ ರವರು ಜಮೀನ ಸರ್ವೇ ನಂ 73/2 ಅ+2 ಬ+2 ಕ+3 ಕ 2 ಎಕರೆ 16 ಗುಂಟೆ , 15 ಗುಂಟೆ ಪುಟ ಖರಾಬ ಹೊರೆತು ಪಡಿಸಿ , ನಿವ್ವಳ 2 ಎಕರೆ 1 ಗುಂಟೆ ದಿಃ 29-12-2017 ರಲ್ಲಿ 3 ಮತ್ತು 4 ನೇ ಪ್ರತಿವಾದಿಯ ನೋಂದಾಯಿತ ಖರೀದಿ ಪ್ರಕಾರ ನೋಂದ ಮಾಡಿರುತ್ತಾರೆ ಅಂದರೆ ಸರಿಯಲ್ಲ . . 2017 ರಲ್ಲಿ ಸರ್ವೇ ನಂ 73/2 ಅ+2 ಬ+2 ಕ+3 ಕ ನಿಂಗಪ್ಪ ಬಸಪ್ಪ ಶಿವಪೂಜಿ ಮತ್ತು ಅಡಿವೆಪ್ಪ ಬಸಪ್ಪ ಶಿವಪೂಜಿ ರವರ ಹೆಸರು ಮಾತ್ರ ದಾಖಲಾಗಿದೆ ಅಂದರೆ ಉತಾರೆ ಸರಿ ಇರುವುದಿಲ್ಲ . 2017 ನೇ ಸಾಲಿನಲ್ಲಿ ಮನೆತನ ಕಾನೂನುಬದ್ಧ

ಅಡಚಣೆ ಉಂಟಾಗಿದ್ದ ಕಾರಣ , 3 ಮತ್ತು 4 ನೇ ಪ್ರತಿವಾದಿಯರು ಸದರಿ ಸರ್ವೇ ನಂ 73/2 ಅ+2 ಬ+2 ಕ+3 ಕ ಮಾರಾಟಕ್ಕೆ ಹಚ್ಚಿದ್ದರು ಅಂದರೆ ಸರಿಯಲ್ಲ . 5 ನೇ ಪ್ರತಿವಾದ ಪ್ರವೀಣ ಮಾರೀಹಾಳ ರವರು ಊರಿನಲ್ಲಿ ವಿಚಾರಣೆ ಮಾಡಿ , ಯಾವ ರೀತಿ ಸದರಿ ಆಸ್ತಿ 3 ಮತ್ತು 4 ನೇ ಪ್ರತಿವಾದಿಗೆ ಬಂದಿದ್ದು ಅಂತಾ ನೋಡಿ ಖರೀದಿ ಮಾಡಿರುತ್ತಾರೆ ಅಂದರೆ ಸರಿ . ಖರೀದಿ ಪತ್ರದ ಅಧಾರ ಪ್ರಕಾರ ಜೇ ಪಾರ್ಮನಲ್ಲಿ ಕೂಡಾ ಹೆಸರು ದಾಖಲು ಮಾಡುವಂತೆ 5 ನೇ ಪ್ರತಿವಾದಿ ಅರ್ಜಿ ನೀಡುತ್ತಾರೆ ಅಂದರೆ ಸರಿಯಲ್ಲ . ಸದರಿ ವಾದಿಗೆ ನಾನು ತಕರಾರು ಸಲ್ಲಿಸಿದ್ದೆ ಅಂದರೆ ಸರಿಯಲ್ಲ . ಅರ ಟಿ ಎಸ ಸಿ ಅರ ನಂ 56/2017-2018 ಪ್ರಕರಣ ನಡೆದಿತ್ತು ಅಂದರೆ ಸರಿಯಲ್ಲ . ನಾನು ಅದರಲ್ಲಿ ಹಾಜರಾಗಿದೆ ಅಂದರೆ ಸರಿಯಲ್ಲ . ಸದರಿ ಪ್ರಕರಣದಲ್ಲಿ ನೋಂದ ಆದ ಖರೀದಿ ಪ್ರಕಾರ 5 ನೇ ಪ್ರತಿವಾದಿ ಆಸ್ತಿ ಖರೀದಿ ಮಾಡಿದ್ದಾರೆ ಅಂತಾ ಅವರು ಹೆಸರು ದಾಖಲು ಮಾಡಿಬೇಕು ಅಂತಾ ತಹಶೀಲದಾರರು ದಿಃ 09-08-2018 ರಂದು ಅದೇಶ ಮಾಡಿರುತ್ತಾರೆ ಅಂದರೆ ಸರಿಯಲ್ಲ . ಸದರಿ ಅದೇಶದ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿಲ್ಲ ಅಂದರೆ ಸರಿಯಲ್ಲ . ನಾನು ಮೇಲ್ಮನವಿ ಸಲ್ಲಿಸಿದ್ದೇನೆ . ಸದರಿ ಮೇಲ್ಮನವಿ ಸಂಖ್ಯೆ ಹೇಳಲು ಬರುವುದಿಲ್ಲ . ನಾನು ಯಾವುದೇ ಮೇಲ್ಮನವಿ ಸಲ್ಲಿಸಿಲ್ಲದಿದ್ದರೂ ಕೂಡಾ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಅಂದರೆ ಸರಿಯಲ್ಲ . ಸದರಿ ಆಸ್ತಿಗೆ ಸಂಬದಿಸಿದಂತೆ 5 ನೇ ಪ್ರತಿವಾದಿಯ ಹೆಸರು ಪ್ರತ್ಯೇಕವಾಗಿ ನಮೂದು ಅಗಿದ್ದು , ಅವರು ಕಬಜಾ ಹೊಂದಿದ್ದಾರೆ ಅಂದರೆ ಸರಿಯಲ್ಲ . ಸದರಿ ಜಮೀನು ಈಗಲೂ ನಮ್ಮ ಕಬಜಾದಲ್ಲಿ ಇದೆ . ಸದರಿ ಜಮೀನು ನನ್ನ ಕಬಜಾದಲ್ಲಿ ಇದೆ ಅಂತಾ ತೋರಿಸಲು ಗ್ರಾಮ ಲೆಕ್ಕಾದಿಕಾರಿಯಿಂದ ಪ್ರಮಾಣ ಪತ್ರ ಪಡೆದಿರುವುದಿಲ್ಲ . ನನ್ನ ಕಬಜಾ ಸಾಬೀತು ಪಡಿಸಲು ನಾನು ಸಾಕ್ಷಿ ಮಾಡಿಸಲು ಅಗುವುದಿಲ್ಲ . ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ . 1984 ರ ಅಪಸಾತ ವಾಟ್ನಿ ಪ್ರಕಾರ ಎಲ್ಲ ಸದಸ್ಯರ ಹೆಸರು ಪ್ರತ್ಯೇಕವಾಗಿ ದಾಖಲಾಗಿದೆ ಅಂದರೆ ಸರಿಯಲ್ಲ .

ಪ್ರತಿವಾದಿ 3 ಹಾಗೂ 6 ರಿಂದ 9 ರವರು ತಮ್ಮ ತಮ್ಮ ಪಾಲಿನ ಅಸ್ತಿಗಳನ್ನು ಬ್ಯಾಂಕಿಗೆ ಅಡ ಇಟ್ಟು ಸಾಲವನ್ನು ಪಡೆದಿರುತ್ತಾರೆ ಅಂದರೆ ಸರಿಯಲ್ಲ . ತಮ್ಮ ತಮ್ಮ ಪಾಲಿನ ಆಸ್ತಿಗಳನ್ನು ಅಬಿವೃದ್ದಿ ಪಡಿಸಿ , ಅವರೆಲ್ಲರೂ ಫಲವತ್ತಾದ ಜಮಿನುಗಳನ್ನು ಮಾಡಿದ್ದಾರೆ ಅಂದರೆ ಸರಿಯಲ್ಲ . ಈಗ ಸದರಿ ಜಮೀನು ಫಲವತ್ತಾಗಿರುವ ಕಾರಣ , ಅದರಲ್ಲಿ ಕೂಡಾ ಹಕ್ಕು ಪಡಯಬೇಕು ಅಂತಾ ಸುಳ್ಳು ಪ್ರಕರಣ ದಾಖಲು ಮಾಡಿದೇನೆ ಅಂದರೆ ಸರಿಯಲ್ಲ .

<u>ಪಾಟೀ ಸವಾಲುಃ 6 ರಿಂದ 9 ನೇ ಪ್ರತಿವಾದಿಯರ ಪರವಾಗಿ ಶ್ರೀ ಎಸ ಎಮ ಎಸ ವಕೀಲರಿಂದ ಃ</u>

15. ನಾನು ಯಾವ ವರ್ಷದಲ್ಲಿ ಜನಿಸಿದ್ದೇನೆ ಅಂತಾ ಗೊತ್ತಿರುವುದಿಲ್ಲ . ನನಗೆ ಈಗ 38 ವರ್ಷ ವಯಸ್ಸು ಆಗಿದೆ . ದಾವಾ ಹುಡುವ ಸಮಯದಲ್ಲಿ ನನ್ನ ವಯಸ್ಸು 38 ಇತ್ತು . ನನಗೆ ಆಂಗ್ಲ ಭಾಷೆ ಬರುವುದಿಲ್ಲ . ವಾದ ಪತ್ರವನ್ನು ನಾನು ಓದಿ ತಿಳಿದುಕೊಂಡು ಅದೇ ಪ್ರಕಾರ ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಅಂದರೆ ಸರಿ . ವಾದ ಪತ್ರದಲ್ಲಿ ನನ್ನ ವಯಸ್ಸು 18 ವರ್ಷ ತೋರಿಸಿದ್ದೇನೆ ಅಂದರೆ ಸರಿಯಲ್ಲ . ನನಗೆ ಈಗ 38 ವರ್ಷ ಅಂತಾ ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರು ಪಡಿಸಿಲ್ಲ ಅಂದರೆ ಸರಿ . 1984 ನೇ ಇಸವಿಯ ನಂತರದಲ್ಲಿ ಆದ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ . ನಾನು ಪ್ರಕರಣದಲ್ಲಿ 1984 ಸಾಲು ಆದ ನಂತರದ ಡೈರಿ ಉತಾರೆಗಳನ್ನು ಹಾಜರು ಪಡಿಸಿದ್ದೇನೆ ಅಂದರೆ ಸರಿ . ನಾನು ಹಾಜರು ಪಡಿಸಿದ ದಾಖಲೆಗಳ ಪ್ರಕಾರ ನಮ್ಮ ವಕೀಲರು ಓದಿ ತಿಳಿಸಿರುತ್ತಾರೆ. ನಾನು ಕೂಡಾ ಓದಿರುತ್ತೇನೆ . ಡೈರಿ ಮತ್ತು ಉತಾರೆಗಳನ್ನು ತಪ್ಪಾಗಿವೆ ಅಂತಾ ನಾನು ಇಲ್ಲಿರೆಗೂ ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಅಂದರೆ ನನಗೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ . ಮುದಕಪ್ಪ ಬಾಳಪ್ಪ ಯಾವ ಸಾಲಿನಲ್ಲಿ ಮರಣ ಹೊಂದಿರುತ್ತಾರೆ ನನಗೆ ಗೊತ್ತಿಲ್ಲ . ಮುದಕಪ್ಪ

ಬಾಳಪ್ಪನಿಗೆ ಎಷ್ಟು ಮಕ್ಕಳು ನನಗೆ ಗೊತ್ತಿಲ್ಲ . 1984 ರಲ್ಲಿ ನನ್ನ ಮತ್ತು ಪ್ರತಿವಾದಿಯ ನಡುವೆ ಅಫಸಾತ ವಾಟ್ನಿ ಆಗಿದೆ ಅಂದರೆ ಸರಿಯಲ್ಲ . ಸರ್ವೇ ನಂ 73/2 ಎ 30 ಗುಂಟೆ ಮತ್ತು ಸರ್ವೇ ನಂ 73/2 ಡ 18 ಗುಂಟೆ , ಸರ್ವೇ ನಂ 73/ಕ 18 ಗುಂಟೆ , ಸರ್ವೇ ನಂ 73/3 ಎ 31 ಗುಂಟೆ ನಿಂಗಪ್ಪ ಅಡಿವೆಪ್ಪ ಶಿವಪೂಜಿ ಇವರ ಹೆಸರಿನಲ್ಲಿ ಬಂದಿತ್ತು ಅಂದರೆ ಸರಿಯಲ್ಲ . ಸರ್ವೇ ನಂ 73/6 ಕ್ಷೇತ್ರ ವನ್ನು 13 ಗುಂಟೆ 26 ಗುಂಟೆ ಇರುತ್ತದೆ. ಸದರಿ ಆಸ್ತಿ ನನ್ನ ಮತ್ತು ಪ್ರತಿವಾದಿಯರ ನಡುವೆ ಜಂಟಿ ಆಗಿ ಇತ್ತು ಅಂದರೆ ಸರಿ . ಅದರಲ್ಲಿ ನಮಗೆ ಆರ್ಧ ಮತ್ತು ಪ್ರತಿವಾದಿಗೆ ಅರ್ದ ಇರುತ್ತದೆ ಅಂದರೆ ಸರಿ . ಪ್ರತಿವಾದಿ ಕಲ್ಲಪ್ಪ ದೇಮಪ್ಪ ಶಿವಪೂಜಿ ರವರು ರೂ 5500/- ದೊಡ್ಡಪ್ಪ ಗಂಗಪ್ಪ ಶಿಂದಗಿ ರವರಿಗೆ ಮತ್ತು ಸಿದ್ದಲಿಂಗಪ್ಪ ಚನ್ನಪ್ಪ ಮಡಿವಾಳರ ರವರಿಗೆ ಅರ್ದ ಹಿಸೆ ಮಾರಾಟ ಮಾಡಿರುತ್ತಾರೆ ಅಂದರೆ ಸರಿ . ಅದರ ಡೈರಿ ನಂ 2403 ಮಂಜೂರು ಅಗಿದೆ ಅಂದರೆ ಮಾಹಿತಿ ಇರುವುದಿಲ್ಲ. . ದೊಡ್ಡಪ್ಪ ಗಂಗಪ್ಪ ಶಿವಪೂಜಿ ಮತ್ತು ಸಿದ್ದಲಿಂಗಪ್ಪ ಚನ್ನಪ್ಪ ಮಡಿವಾಳ ರವರ ಹೆಸರು ಊತಾರೆಗಳಲ್ಲಿ ದಾಖಲಾಗಿದೆ ಅಂದರೆ ಸರಿ . ಸದರಿ ರವರು ಆಸ್ತಿಯ ಕಬಜಾದಲ್ಲಿ ಇದ್ದಾರೆ ಅಂದರೆ ಸರಿ . ದೂಡ್ಡಪ್ಪ ಗಂಗಪ್ಪ ಶಿವಪೂಜಿ ಮತ್ತು ಸಿದ್ದಲಿಂಗಪ್ಪ ಚನ್ನಪ್ಪ ಮಡಿವಾಳ ರವರು ಇಬ್ಬರ ನಡುವೆ ಸರಿ ಬಾರದ ಕಾರಣ , ಖರೀದಿಸಿದ ಆಸ್ತಿಗಳನ್ನು ಎರಡೂ ಭಾಗ ಮಾಡಿಕೂಂಡರು ಅಂದರೆ ನನಗೆ ಮಾಹಿತಿ ಇರುವುದಿಲ್ಲ . ದೂಡಪ್ಪ ಶಿದ್ದಗಿರಿ ರವರು ತಮಗೆ ಬಂದ ಜಮೀನು ತನ್ನ ಮಗ ಬಾಬುವಿನ ಹೆಸರಿಗೆ ವರ್ಗಾವಣೆ ಮಾಡಿರುತ್ತಾರೆ ಅಂದರೆ ನನಗೆ ಮಾಹಿತಿ ಇರುವುದಿಲ್ಲ . ದೊಡಪ್ಪ ಗಂಗಪ್ಪ ಶಿವಪೂಜಿ ಮತ್ತು ಸಿದ್ದಲಿಂಗಪ್ಪ ಚನ್ನಪ್ಪ ಮಡಿವಾಳ ರವರು ವಾಟ್ನಿ ಮಾಡಿಕೊಂಡ ಪ್ರಕಾರ 3 ಎಕರೆ 20 ಗುಂಟೆ ಜಮೀನು ತಲಾ ಹಂಚಿಕೊಂಡಿರಾುತ್ತಾರೆ ಅಂದರೆ ನನಗೆ ಮಾಹಿತಿ ಇರುವುದಿಲ್ಲ . ಅದರಲ್ಲಿ 8 ಗುಂಟೆ ಪೂಟ ಖರಾಬ ಇದೆ ಅಂದರೆ ಮಾಹಿತಿ ಇರುವುದಿಲ್ಲ . ಸದರಿ ಆಸ್ತಿಯಲ್ಲಿ ಪಶ್ಚಿಮ ಬಾಗ ದೊಡಪ್ಪ ಶಿದ್ದಗಿರಿ ರವರಿಗೆ ಬಂದಿದೆ ಅಂದರೆ ನನಗೆ ಮಾಹಿತಿ ಇಲ್ಲ .

ಸಿದ್ದಲಿಂಗಪ್ಪ ಚನ್ನಪ್ಪ ಮಡಿವಾಳ ರವರಿಗೆ 3 ಎಕರೆ 20 ಗುಂಟೆ ಬಂದಿದೆ ಅಂದರೆ ನನಗೆ ಗೊತ್ತಿಲ್ಲ . ಅದರಲ್ಲಿ 9 ಗುಂಟೆ ಪೂಟ ಖರಾಬ ಇದೆ ಅಂದರೆ ಗೂತಿಲ್ಲ . ಪೂರ್ವ ಬಾಗದ 3 ಎಕರೆ 20 ಗುಂಗೆ ಶಿದ್ದಲಿಂಗಪ್ಪನಿಗೆ ಬಂದಿದೆ ಅಂದರೆ ಗೂತ್ತಿಲ್ಲ . ಅದರಂತೆ ಡ್ಯರಿ ನಂ 2655 ನ್ನು 07-02-1990 ರಂದು ಮಂಜೂರು ಅಗಿದೆ ಅಂದರೆ ಮಾಹಿತಿ ಇರುವುದಿಲ್ಲ . ಅದರಂತೆ ದೂಡಪ್ಪ ಪಶ್ಚಿಮ ಬಾಗ ಮತ್ತು ಶಿದ್ದಲಿಂಗಪ್ಪ ಮಡಿವಾಳರ ಪೂರ್ವ ಭಾಗದ ಆಸ್ತಿ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಅಂದರೆ ಗೊತ್ತಿಲ್ಲ . ದೂಡ್ಡಪ್ಪನಿಗೆ ಮನೆತನದ ಅಡಚಣೆ ಸಲುವಾಗಿ ತನ್ನ ಪಾಲಿನ ಆಸ್ತಿ ಮಾರಾಟ ಮಾಡಿರುತ್ತಾರೆ ಅಂದರೆ ಗೊತ್ತಿಲ್ಲ . ಬಾಬು ದೂಡ್ಡಪ್ಪ ಶಿದ್ದಗಿರಿ , ದೂಡ್ಡಕಲ್ಲವ್ವ ದೂಡ್ಡಪ್ಪ ಶಿದ್ದಗಿರಿ ಮತು ಮುರಿಗೇಪ್ಪ ಶಿದ್ದಪ್ಪ ಶಿದ್ದಗಿರಿ ಮತ್ತು ಗಂಗಪ್ಪ ದೂಡ್ಡಪ್ಪ ಶಿದ್ದಗಿರಿ ರವರು ಎಲ್ಲರೂ ಸತ್ಯಮ್ಮ ಸತ್ಯೋಜಾ ಹುಗಾರ ರವರಿಗೆ ಸರ್ವೇ ನಂ 75/5 ಎ+ಬ+6+1/ಎ/2 ಕ್ಷೇತ್ರ 3 ಎಕರೆ 20 ಗುಂಟೆಗೆ ಸಂಬಂದಿಸಿದಂತೆ ವ್ಯವಹಾರ ಮಾಡಲು ಮುಖ್ತಾರ ಪತ್ರ ಬರೆದುಕೂಂಡಿರುತ್ತಾರೆ ಅಂದರೆ ನನಗೆ ಮಾಹಿತಿ ಇರುವುದಿಲ್ಲ . ಒಟ್ಟು ಮುಖಾರ ಪತ್ರ ದಿಃ 16-11-2016 ರಂದು ಪ್ರತಿವಾದಿ 11 ರವರಿಗೆ ಸದರಿ ಆಸ್ತಿ ಸರ್ವೇ ನಂ 75/5 ಎ+ಬ+6+1/ಎ/2 2 ಎಕರೆ 2 ಗುಂಟೆ ಮಾರಾಟ ಮಾಡಿರುತ್ತರೆ ಅಂದರೆ ನನಗೆ ಗೂತ್ತಿಲ್ಲ . ಅದರಲ್ಲಿ 2 ಗುಂಟೆ ಪೂಟ ಖರಾದ ಇದೆ ಅಂದರೆ ಸರ್ವೇ ನಂ 73/ಅ/11 ಅಂತಾ ಅಗಿದೆ ಅಂದರೆ ಸರಿಯಲ್ಲ . ಇದರ ಪೂರ್ವೆಕ್ಕೆ ಬಸಪ್ಪ ಶಿವಪೂಜಿ ರವರ ಜಮೀನು ಇದೆ ಅಂದರೆ ನನಗೆ ಮಾಹಿತಿ ಇಲ್ಲ . ಪಶ್ಚಿಮಕ್ಕೆ ಬಾಬು ದೂಡಪ್ಪ ಶಿದ್ದಗಿರಿ ರವರ ಜಮೀನು , ಉತ್ತರಕ್ಕೆ ರಸ್ತೆ , ದಕ್ಷಿಣಕ್ಕೆ ಒಟ್ಟು ಮುಖ್ತಾರದಾರನ ಜಮೀನು ಇದೆ ಅಂದರೆ ಗೂತ್ತಿಲ್ಲ . ಖರೀದಿದಾರರು ಖರೀದಿಸಿದ ಆಸ್ತಿಯ ಕಬಜಾ ವಹಿವಾಟಿನಲ್ಲಿ ಇದ್ದಾರೆ ಅಂದರೆ ಸರಿಯಲ್ಲ . ಅದರಂತೆ ಉತಾರೆಯಲ್ಲಿ ಕೂಡಾ ಖರೀದಿದಾರರ ಹೆಸರು ಬಂದಿದೆ ಅಂದರೆ ಸರಿಯಲ್ಲ . ಡೈರಿ ನಂ ಹೆಚ-24-2016-2017 ನ್ನು ದಿಃ 30-12-2016 ರಂದು ಮಂಜೂರು ಅಗಿತ್ತು ಅಂದರೆ ನನಗೆ ಮಾಹಿತಿ ಇಲ್ಲ . ಅದರಂತೆ 11 ನೇ ಪ್ರತಿವಾದಿ ಸತ್ಯಮ್ಮ ಹುಗಾರ

ಆಸ್ತಿಯ ಸ್ವಾಧೀನ ಹೊಂದಿರುತ್ತಾರೆ ಅಂದರೆ ನನಗೆ ಮಾಹಿತಿ ಇಲ್ಲ . ನನಗೆ ಎಲ್ಲ ವಿಚಾರ ಗೊತ್ತಿದ್ದರೂ ಕೂಡಾ ನನಗೆ ಗೊತ್ತಿಲ್ಲ ಅಂತಾ ಸಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ . ಬಾಬು ಶಿದ್ದಗಿರಿ ಮತು ದೂಡ್ಡಪ್ಪ ಶಿದ್ದಗಿರಿ ರವರು ಕಬಜಾದಲ್ಲಿ ಇದ್ದರೂ ಅಂತಾ ನನಗೆ ಗೊತ್ತಿದ್ದರೂ ಕೂಡಾ ನಾನು ಸುಳ್ಳು ಸಾಕ್ಷಿ ನುಡಿಯುುತ್ತಿದ್ದೇನೆ ಅಂದರೆ ಸರಿಯಲ್ಲ .

<u>ಪಾಟೀ ಸವಾಲುಃ 12, ಮತ್ತು 13 ನೇ ಪ್ರತಿವಾದಿಯರ ಪರವಾಗಿ ಶ್ರೀ ಅರ ಎಸ ಕೆ ವಕೀಲರಿಂದ ಃ</u>

ದಾವಾದ ಆಸ್ತಿಯ ಚೆಕ ಬಂದಿ ತೆಗೆಯಲು ನಾನು ಮಾಹಿತಿ ಕೂಟ್ಟಿಲ್ಲ . ಮಾಹಿತಿ ಕೊಡಲು ತೊಂದರೆ ಇದ್ದಿರಲಿಲ್ಲ ಅಂದರೆ ಸರಿ . ಸರ್ವೇ ನಂ 76/3 ಎ 10 ಗುಂಟೆ ಸರಕಾರದವರು ವಶ ಪಡಿಸಿಕೂಂಡಿದ್ದಾರೆ ಅಂದರೆ ಸರಿ . ಸದರಿ 10 ಗುಂಟೆ ಜಮೀನಿಗೆ ಸರಕಾರದ ಹೆಸರು ದಾಖಲಾಗಿದೆ ಅಂದರೆ ಸರಿ . ಅದರಂತೆ ಹಕ್ಕು ದಾಖಲೆ ಎಮ ಇ ನಂ 1957 ದಿಃ 28-08-1976 ರಂದು ದಾಖಲಾಗಿದೆ ಅಂದರೆ ಸರಿ . ಸರ್ವೇ ನಂ 76/3 ಎ 18 ಗುಂಟೆ ಕೂಡಾ ಸರಕಾರದವರು ವಶ ಪಡಿಸಿಕೂಂಡಿದ್ದಾರೆ ಅಂದರೆ ಸರಿ . ಹಕ್ಕು ದಾಖಲೆ ನಂ 2360 ದಿಃ 14-08-1983 ದಾಖಲಾಗಿದೆ ಅಂದರೆ ಸರಿ . ವಶ ಪಡಿಸಿಕೂಂಡ ಜಮೀನಕ್ಕೆ ಸಂಬಂದಿಸಿದಂತೆ ಸರಕಾರದವರು ಪರಿಹಾರ ನೀಡಿರುತ್ತಾರೆ ಅಂದರೆ ಸರಿಯಲ್ಲ . ಸರಕಾರ ವಶಪಡಿಸಿಕೂಂಡ ಜಮೀನಿಗೆ ನನ್ನ ಹಕ್ಕು ಇರುವುದಿಲ್ಲ ಅಂದರೆ ಸರಿಯಲ್ಲ . ಸರಕಾರದವರು ಆಸ್ತಿ ವಶಪಡಿಸಿಕೊಂಡ ಜಮೀನಿನ ಬಗ್ಗೆ ನಾವು ನ್ಯಾಯಾಲಯಕ್ಕೆ ಪ್ರಶ್ನೆ ವಾಡಿಲ್ಲ ಅಂದರೆ ನನಗೆ ಮಾಹಿತಿ ಇಲ್ಲ . ಸದರಿ ವಶಪಡಿಸಿಕೂಂಡ ಜಮೀನುಗಳಲ್ಲಿ ಈಗ ಮನೆಗಳು ಇವೆ . ಸರಕಾರದವರು ಮನೆಗಳನ್ನು ಮಾಡಿದ್ದು ಅದನ್ನು ಬೇರೆ ಬೇರೆ ವ್ಯಕ್ತಿಗಳ ಸ್ವಾದೀನದಲ್ಲಿ ಇದೆ ಅಂದರೆ ಸರಿ . ಭೂ ಸ್ವಾದೀನ ಪಡಿಸಿಕೊಂಡಿದ್ದು ಸುಳ್ಳು ಇದೆ ಅಂತಾ ನಾನು ಪ್ರಶ್ನೆ ಮಾಡಿಲ್ಲ . ಸರಕಾರ ವಶಪಡಿಸಿಕೊಂಡ ಅಸ್ತಿಗಳ ಮೇಲೆ ನನಗೆ ಹಕ್ಕು ಇಲ್ಲದಿದ್ದರೂ ಸಹ ಕಿರುಕೂಳ ಕೂಡಮ ಸಲುವಾಗಿ ಅನಾವಶ್ಯಕವಾಗಿ ಸರಕಾರದವರನ್ನು ಪಕ್ಷಗಾರನಾಗಿ ಮಾಡಿದ್ದೇನೆ ಅಂದರೆ

ಸರಿಯಲ್ಲ. ದಾವಾ ಹುಡಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ . ಯಾವ ಆಸ್ತಿಗಳು ಬೂ ಸ್ವಾದೀನ ಅಗಿದೆ ಅಂತಾ ಮಾಹಿತಿ ನೀಡಿದ್ದೇನೆ ದಾವಾ ಹುಡುವ ಪೂರ್ವದಲ್ಲಿ ಸರಕಾರಕ್ಕೆ ನೋಟೀಸ ನೀಡಿರುವುದಿಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಗಣಕೀಕೃತ ಗೊಳಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಬೈಲಹೊಂಗಲ.